# ಬಾರ್ಬಿ
## ಬೊಂಬೆಗಳ ಲೋಕದ ಕಣ್ಮಣಿ



**ಕಾಲ–ದೇಶಗಳ ಚೌಕಟ್ಟನ್ನು ದಾಟಿ ವಿಶ್ವದಾದ್ಯಂತ ಜನಪ್ರಿಯವಾಗಿರುವ ಗೊಂಬೆ ಬಾರ್ಬಿ. ಇದು ಕೇವಲ ಬೊಂಬೆಷ್ಟೇ ಅಲ್ಲ – ಸಾಂಸ್ಕೃತಿಕ ಕೊಂಡಿಯ ರೂಪದಲ್ಲಿ ಚಾಲ್ತಿಯಲ್ಲಿದ್ದಾಳೆ. ಮಕ್ಕಳು, ಹದಿಹರೆಯದವರ ನೆಚ್ಚಿನ ಸ್ನೇಹಿತೆಯಾದ ಬಾರ್ಬಿ ಅನೇಕ ಸಿನಿಮಾ ಹಾಗೂ ಸಾಹಿತ್ಯ ಕೃತಿಗಳ ಹುಟ್ಟಿಗೂ ಕಾರಣಳಾಗಿದ್ದಾಳೆ.**

**■ ನರೇಂದ್ರ ಎಸ್. ಗಂಗೊಳ್ಳಿ**

ವರ್ಷ ತುಂಬಿರದ ಮಗು ಕೂಡ ಆಕೆಯೊಂದಿಗೆ ತನ್ನ ಮೌನ ಭಾಷೆಯಲ್ಲಿ ಮಾತನಾಡತೊಡಗುತ್ತದೆ. ಸಣ್ಣ ಮಕ್ಕಳಿಗಂತೂ ಆಕೆ ಮುದ್ದಿನ ಗೆಳತಿ. ದೊಡ್ಡವರೂ ಕೂಡ ಆಕೆಯ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲಾರರು. ಮಕ್ಕಳಿಂದ ಹಿರಿಯರವರೆಗೆ ಎಲ್ಲರನ್ನು ತನ್ನ ಸ್ನಿಗ್ಧ ಸೌಂದರ್ಯದಿಂದ ಸೆಳೆದಿಟ್ಟುಕೊಂಡಿರುವ ಹುಡುಗಿಯ ಹೆಸರು ಬಾರ್ಬಿ. ಆಕೆ ಒಂದು ಗೊಂಬೆ.

ಇಡೀ ವಿಶ್ವದಲ್ಲಿ ಅತೀ ಹೆಚ್ಚು ಮಾರಾಟವಾಗುವ ಗೊಂಬೆ ಎನ್ನುವುದು ಬಾರ್ಬಿಯ ವಿಶೇಷ.

### ಬಾರ್ಬಿಯ ಹುಟ್ಟು

ಅಮೆರಿಕಾದ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ 'ಮೆಟೆಲ್' ಎನ್ನುವ ಮಕ್ಕಳ ಆಟಿಕೆಗಳನ್ನು ತಯಾರಿಸುವ ಪ್ರಖ್ಯಾತ ಕಂಪನಿಯಿದೆ. 1945ರಲ್ಲಿ ರುತ್ ಮತ್ತು ಇಲಿಯಟ್ ಹ್ಯಾಂಡ್ಲರ್ ಸೇರಿಕೊಂಡು ರಚಿಸಿದ ಕಂಪನಿಯಿದು. ರುತ್ ಹ್ಯಾಂಡ್ಲರ್ ತನ್ನ ಮಗಳು ಪುಟ್ಟ ಮಗುವಿನಂತಹ ಬೊಂಬೆಗಳೊಂದಿಗೆ ಆಟವಾಡುವಾಗ ಅವುಗಳಿಗೆ ಹದಿಹರೆಯದವರ ಉಡುಪುಗಳನ್ನು ತೊಡಿಸಿ ಖುಷಿಪಡುವುದನ್ನು ನೋಡುತ್ತಿದ್ದಳು. 1956ರಲ್ಲಿ ರುತ್ ಸ್ವಿಟ್ಜರ್‌ಲೆಂಡ್‌ನಲ್ಲಿ ತಿರುಗಾಡುತ್ತಿದ್ದಾಗ ಅಂಗಡಿಯೊಂದರಲ್ಲಿ ಜರ್ಮನ್ ಮೂಲದ ಟೀನೇಜ್ ಗೊಂಬೆ 'ಬಿಲ್ಡ್‌ಲಿಲ್ಲಿ'ಯನ್ನು ನೋಡಿದಳು. ತನ್ನ ಕಂಪನಿಯಲ್ಲೂ ಅಂತಹದ್ದೊಂದು ಗೊಂಬೆ ತಯಾರಿಸಬೇಕು ಎನ್ನಿಸಿತು. ಹೀಗೆ ಮೊಳೆತದ್ದು ಬಾರ್ಬಿ ಕನಸು. ರುತ್ ತನ್ನ ಮಗಳು ಬಾರ್ಬರಾ ಹೆಸರನ್ನೇ ಗೊಂಬೆಗೆ ಇಟ್ಟು 'ಬಾರ್ಬಿ' ಎಂದು ನಾಮಕರಣ ಮಾಡಿದಳು. ಹಾಂ, ಬಾರ್ಬಿಯ ಪೂರ್ಣ ಹೆಸರು 'ಬಾರ್ಬರಾ ಮಿಲಿಸೆಂಟ್ ರಾಬರ್ಟ್ಸ್'.

### ಪ್ರಥಮ ಬಾರ್ಬಿ ಹೇಗಿದ್ದಳು...!

ಮೊದಲ ಬಾರ್ಬಿ ಕಪ್ಪು ಬಿಳುಪು ಈಜುಡುಗೆ ಧರಿಸಿದ್ದ ಹನ್ನೊಂದೂವರೆ ಇಂಚು ಎತ್ತರದ ಸುಂದರಿ. ಸನ್ ಗ್ಲಾಸ್ ಶೂಗಳನ್ನು ಧರಿಸಿದ್ದಳು. 1995ರ ಮಾರ್ಚ್ 9ರಂದು ನ್ಯೂಯಾರ್ಕ್‌ನಲ್ಲಿ ನಡೆದ ಗೊಂಬೆ ಮೇಳದಲ್ಲಿ ಈಕೆಯನ್ನು ಪರಿಚಯಿಸಿದಾಗ ಜನ ಮುಗಿಬಿದ್ದು ಖರೀದಿಸಿದ್ದರು. ವರ್ಷದ ಅವಧಿಯಲ್ಲಿ 3.5 ಲಕ್ಷ ಬಾರ್ಬಿ ಗೊಂಬೆಗಳು ಮಾರಾಟವಾಗಿದ್ದವು. ವಿಶೇಷವೆಂದರೆ, ಅಷ್ಟೂ ಬಾರ್ಬಿ ಗೊಂಬೆಗಳನ್ನು ಜಪಾನ್‌ನಲ್ಲಿ ತಯಾರಿಸಲಾಗಿತ್ತು. ಅಷ್ಟೂ ಗೊಂಬೆಗಳ ಬಟ್ಟೆಗಳನ್ನು ಕೈಗಳಲ್ಲಿ ಹೊಲಿಯಲಾಗಿತ್ತು. ಈ ಹೊರಗುತ್ತಿಗೆಗೆ ಕಾರಣ ಉತ್ಪಾದನಾ ವೆಚ್ಚವನ್ನು ಉಳಿಸುವುದಾಗಿತ್ತು.

ದಿನದಿಂದ ದಿನಕ್ಕೆ ಬಾರ್ಬಿಯ ಬೇಡಿಕೆ ಏರುತ್ತಲೇ ಹೋಯಿತು. ಸ್ವಿಮ್ ಸೂಟ್‌ನೊಂದಿಗೆ ಟೀನೇಜ್ ಫ್ಯಾಶನ್ ಮಾಡೆಲ್ ಆಗಿ ಗೊಂಬೆಗಳ ಜಗತ್ತಿಗೆ ಕಾಲಿರಿಸಿದ ಬಾರ್ಬಿ, ಇವತ್ತಿನವರೆಗೆ ಸುಮಾರು ನೂರ ಇಪ್ಪತ್ತೈದಕ್ಕೂ ಅಧಿಕ ರೂಪಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಡಾಕ್ಟರ್, ವ್ಯೋಮಯಾನಿ, ಅಥ್ಲೀಟ್, ಪೈಲೆಟ್, ಕಂಪ್ಯೂಟರ್ ಇಂಜಿನಿಯರ್ – ಹೀಗೆ ಬಾರ್ಬಿ ಬಹುರೂಪಿ. ಅಮೆರಿಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯ ರೂಪದಲ್ಲೂ ಬಾರ್ಬಿ ತಯಾರಾಗಿತ್ತು.

### ಬಾರ್ಬಿ ಮನೇನಾ?

ಬಾರ್ಬಿ ಗೊಂಬೆ ಪ್ರಸಿದ್ಧಿಯಾದ ಬೆನ್ನಲ್ಲೇ ಅವಳಿಗೆ ಸಂಬಂಧಿಸಿದಂತೆ ನೂರಾರು ಆಟಿಕೆಗಳನ್ನು ಮಾರುಕಟ್ಟೆಗೆ ಪರಿಚಯಿಸಲಾಯಿತು. ಅದರಲ್ಲಿ ಬಾರ್ಬಿ ಮನೆಯೂ ಒಂದು. ಆಕೆಗಾಗಿ ಒಂದಷ್ಟು ಸಾಕು ಪ್ರಾಣಿಗಳ ಆಟಿಕೆಗಳು ತಯಾರುಗೊಂಡವು. ಆಕೆಯ ಮೊದಲ ಸಾಕು ಪ್ರಾಣಿ ಒಂದು ಕುದುರೆ. ಅದರ ಹೆಸರು– ಡ್ಯಾನ್ಸರ್. ನಾಯಿ ಬೆಕ್ಕು ಪಾಂಡಾ, ಜಿರಾಫೆ ಸೇರಿದಂತೆ ಐವತ್ತಕ್ಕೂ ಹೆಚ್ಚಿನ ಆಟಿಕೆಗಳು ಬಾರ್ಬಿಗಾಗಿ ತಯಾರಾದವು. ಇಷ್ಟೇ ಅಲ್ಲ! ಬಾರ್ಬಿಯ ಮನೆಯಲ್ಲಿ ವಾಸ ಮಾಡಲು ಅವಳ ತಮ್ಮ–ತಂಗಿಯಂದಿರ ಗೊಂಬೆಗಳೂ ತಯಾರಾದವು. ಆ ಸಾಲಿನಲ್ಲಿ ಸ್ಕಿಪ್ಪರ್, ಕೆಲ್ಲಿ, ಕ್ರಿಸ್ಸಿ, ಫ್ರಾನ್ಸಿ ಜೊತೆಗೆ ಅವಳಿಗಳಾಗಿ ಟಾಡ್ ಮತ್ತು ಸ್ಟ್ಯಾಸಿ ಗೊಂಬೆಗಳು